ಅವರು ತಮಗಾಗಿಯೇ – ನಿವೃತ್ತಿಯ ನಂತರದ ದಿನಗಳಿಗಾಗಿ – ಸಿದ್ಧಪಡಿಸಿಕೊಂಡು ವಿಸ್ತೃತ ಕ್ರಿಯಾಯೋಜನೆಯಂತೆ ಭಾಸವಾಗುತ್ತದೆ. ಅವರು ಸೂಚಿಸಿದ ಮುಖ್ಯ ಉಪಾಯಗಳೆಂದರೆ ಲಿಟರರಿ ಸ್ಕಾಲರ್ಶಿಪ್ ಬಲಪಡಿಸುವುದು ಹಾಗೂ ಕನ್ನಡದ್ದೇ ಆದ ಸಾಹಿತ್ಯ ಪರಂಪರೆಯನ್ನು ಶೋಧಿಸುವುದು. ಆಮೂರರು ಈ ಮುಂದಿನ ತಮ್ಮ ಕನ್ನಡ ವಿಮರ್ಶಾ ಬರವಣಿಗೆಯಲ್ಲಿ ಮಾಡಿದ ಸಾಹಿತ್ಯ ಪ್ರಕಾರಗಳ ಸ್ವರೂಪದ ಚರ್ಚೆ, ಪಾರಿಭಾಷಿಕ ಪದಗಳ ಹಾಗೂ ಪರಿಕಲ್ಪನೆಗಳ ಚರ್ಚೆ ಹಾಗೂ ಕಾರ್ಯನಿರತ ಸಾಹಿತಿಗಳ ಕಾವ್ಯಶಾಸ್ತ್ರ ಶೋಧ – ಇವನ್ನೆಲ್ಲ ಲಿಟರರಿ ಸ್ಕಾಲರ್ಶಿಪ್ ಬಲಪಡಿಸುವ ಕೆಲಸಗಳೆಂದು ನೋಡಬಹುದಾದರೆ, ಪ್ರಮುಖ ಸಾಹಿತಿಗಳ ಹಾಗೂ ಸಾಹಿತ್ಯ ಪ್ರಕಾರಗಳ ಸಮಗ್ರ ಅಧ್ಯಯನ, ಅಧಿಕೃತ ಕೃತಿ ಸಮೂಹವನ್ನು ಗುರುತಿಸುವುದು, ಅಂಥಾಲಜಿಗಳ ಸಂಪಾದನೆ – ಇವನ್ನೆಲ್ಲ ಪರಂಪರೆಯ ಶೋಧದ ಪ್ರಯತ್ನಗಳೆಂದು ನೋಡಬಹುದು.

ಆಮೂರರ ವಿಮರ್ಶೆಯ ಬಹುದೊಡ್ಡ ಭಾಗ ಕನ್ನಡದ ಕೆಲವು ಪ್ರಮುಖ ಲೇಖಕರ (ಬೇಂದ್ರೆ, ಶ್ರೀರಂಗ, ಅನಕೃ, ಶಾಂತಿನಾಥ ದೇಸಾಯಿ, ಕುವೆಂಪು, ಕಾರ್ನಾಡ್, ಗೋಕಾಕ್, ಮುಂ) ಸಮಗ್ರ ಅಧ್ಯಯನಕ್ಕೆ ಹಾಗೂ ಸಾಹಿತ್ಯ ಪ್ರಕಾರಗಳ (ಕಾದಂಬರಿ, ಸಣ್ಣ ಕತೆ, ನಾಟಕ, ಕಾವ್ಯ, ವಿಮರ್ಶೆ) ಸಮಗ್ರ ಅಧ್ಯಯನಕ್ಕೆ ವಿನಿಯೋಗವಾಗಿದೆ. ಸ್ಥೂಲವಾಗಿ ಲೇಖಕರನ್ನು ಕೇಂದ್ರವಾಗಿಟ್ಟುಕೊಂಡಿರುವ ಅಧ್ಯಯನಗಳಲ್ಲಿ ಆಯಾ ಲೇಖಕರ ಕಲೆಯ ವಿಕಾಸ ಹಾಗೂ ದರ್ಶನದ ಅಖಂಡತೆಯನ್ನು ಕಂಡುಕೊಳ್ಳುವುದು ಅವರ ಗುರಿಯಾಗಿದ್ದರೆ, ಪ್ರಕಾರ ಕೇಂದ್ರಿತ ಅಧ್ಯಯನಗಳಲ್ಲಿ ಪ್ರಕಾರಗಳ ವಿಕಾಸಕ್ರಮಗಳನ್ನು ಗುರುತಿಸುವುದು ಹಾಗೂ ಕೇಂದ್ರ ಪರಂಪರೆಯನ್ನು ಗುರುತಿಸುವುದು ಅವರ ಉದ್ದೇಶವಾಗಿದೆ. ಒಂದು ದೃಷ್ಟಿಯಿಂದ ಇವೆರಡೂ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಸಾಗುವ ವಿಮರ್ಶಾ ಚಟುವಟಿಕೆಗಳು. ಲೇಖಕರ ಸಾಧನೆಯನ್ನು ಚರ್ಚಿಸುವ ಕೃತಿಗಳು ಅವರ ಎಲ್ಲಾ ಬರಹಗಳನ್ನೂ ಒಳಗೊಳ್ಳುವ ಹಾಗೂ ಸಮಗ್ರವಾಗುವ ದಿಕ್ಕಿನಲ್ಲಿ ಚಲಿಸಿದರೆ, ಪ್ರಕಾರವೊಂದರಲ್ಲಿ ಕೇಂದ್ರ ಪರಂಪರೆಯನ್ನು ಗುರುತಿಸುವ ಬರಹಗಳಲ್ಲಿ ಆಯ್ಕೆ ಹಾಗೂ ಅಪೂರ್ಣತೆ ಅನಿವಾರ್ಯವಾಗಿದೆ. ಪರಂಪರೆಯ ಉಪಸ್ಥಿತಿಯನ್ನು ನಿರ್ಧರಿಸಲು ಹಾಗೂ ಅದರ ಗಟ್ಟಿತನವನ್ನು ಪರೀಕ್ಷಿಸಲು ಪ್ರಭಾವಗಳನ್ನು ಜೀರ್ಣಿಸಿಕೊಳ್ಳುವ ಸಾಮರ್ಥ್ಯ ಹಾಗೂ ಅಂತಃಪ್ರಭಾವಗಳ ಉಪಸ್ಥಿತಿಯನ್ನು ಆಮೂರರು ನಿಕಷಗಳಾಗಿ ಬಳಸಿಕೊಂಡಿದ್ದಾರೆ. ಅವರು ಕನ್ನಡ ಸಾಹಿತ್ಯ ಕೃತಿಗಳ ನಡುವೆ ಖಚಿತವಾಗಿ ಗುರುತಿಸಿರುವ ಅಂತಃಸಂಬಂಧ ಹಾಗೂ ಅಂತಃಪಠ್ಯೀಯತೆ – ಅವರ ನಿಕಷವನ್ನು ಒಪ್ಪುವುದಾದರೆ – ಪರಂಪರೆಯ ಅಸ್ತಿತ್ವವನ್ನು ವಿವಾದಾತೀತವಾಗಿ ಸ್ಥಾಪಿಸಿವೆ ಹಾಗೂ ಕನ್ನಡ ಸಾಹಿತ್ಯದಲ್ಲಿ ನಡೆದ ಸಾಂಸ್ಕೃತಿಕ ಸಂವಾದಗಳನ್ನು ಮುನ್ನೆಲೆಗೆ ತಂದಿವೆ. ಇದು ಅವರ ವಿಮರ್ಶೆಯ ದೊಡ್ಡ ಸಾಧನೆ.

ಆಮೂರರ ಬಾಳ ಪಯಣದಲ್ಲಿರುವ ಎರಡು ಹಂತಗಳಿಗೆ ಸಂವಾದಿಯಾಗಿಯೇ ಅವರ ವಿಮರ್ಶಾ ನಿಲುವಿನಲ್ಲಾಗಿರುವ ಪಲ್ಲಟವೂ ಇದೆ. ಸಾಹಿತ್ಯ ಕೃತಿಯೆಂದರೆ ಒಂದು ಭಾಷಿಕ ಸಂರಚನೆ ಎಂಬಲ್ಲಿಂದ ಸಾಹಿತ್ಯವು ಒಂದು ಸಾಂಸ್ಕೃತಿಕ ರಚನೆ ಕೂಡ ಹೌದು ಎಂಬ ಕಡೆಗೆ, ಕೃತಿನಿಷ್ಠ ವಿಮರ್ಶೆಯೊಂದೇ ಪರಿಪೂರ್ಣ ವಿಮರ್ಶಾ ಮಾರ್ಗ ಎಂಬಲ್ಲಿಂದ ವಿಮರ್ಶೆಯ ಬಹುತ್ವವನ್ನೂ ಬಹುಮುಖತ್ವವನ್ನೂ ಅನುಮೋದಿಸುವ ಕಡೆಗೆ, ಸಾಹಿತ್ಯದಲ್ಲಿ ರಾಷ್ಟ್ರೀಯತೆಗೆ ಅವಕಾಶವೇ ಇಲ್ಲವೆಂಬ ಅನಿಕೇತನ ಧೋರಣೆಯಿಂದ ಗಾಢವಾದ ರಾಜಕೀಯ ಲೇಪನವಿರುವ 'ನಮ್ಮದೇ' ಆದ ಪರಂಪರೆಯ ಶೋಧ ಹಾಗೂ ಪ್ರತಿಷ್ಠಾಪನೆಯ ಕಡೆ ಚಲಿಸುವುದು ಈ ಪ್ರಯಾಣದ ವಿನ್ಯಾಸ.

ವಿಮರ್ಶಾ ಬರಹಗಳು ವಿಮರ್ಶಕನ ಚಿತ್ರವೊಂದನ್ನು ಕಟ್ಟಿಕೊಡುತ್ತದೆ ಎಂದು ಒಪ್ಪುತ್ತೀರಾದರೆ, ಆಮೂರರ ವಿಮರ್ಶಾ ಬರಹಗಳಿಂದ ಒಡಮೂಡುವ ಚಿತ್ರವೆಂದರೆ ಮನೆಯ ಕಾಳಜಿಯುಳ್ಳ ಸದ್ಗೃಹಸ್ಥನದು. ಇದು ಅವರ ಕವನಗಳಲ್ಲೂ ಮೂಡುವ ಚಿತ್ರ ಎಂಬುದಕ್ಕಾಗಿ ಅವರ ಈ ಕವನ: